ತಡೆಗೋಡೆ ನಿರ್ಮಿಸುವುದು

927 (1547); ಶ್ರೀ ಕೋನರೆಡ್ಡಿ ಎನ್.ಎಚ್. (ನವಲಗುಂದ)

ಅ) ಡಾ. ಪರಮಶಿವಯ್ಯ ವರದಿಯಂತೆ ಬೆಣ್ಣೆ ಹಳ್ಳ ಪ್ರವಾಹದಿಂದ ಪ್ರತಿ ಸಲ ಹಾನಿಯಾಗುತ್ತಿರುವುದನ್ನು ತಡೆಗಟ್ಟಲು ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲ್ಲೂಕಿನಲ್ಲಿರುವ ಬೆಣ್ಣೆ ಹಳ್ಳದಿಂದ ಕುಂದಗೋಳ, ಹುಬ್ಬಳ್ಳಿ, ನವಲಗುಂದ, ನರಗುಂದ ಮುಂತಾದ ತಾಲ್ಲೂಕುಗಳಿಗೆ ಪ್ರತಿ ವರ್ಷ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) 2013–14ನೇ ಸಾಲಿನಲ್ಲಿ ಬೆಣ್ಣೆ ಹಳ್ಳ ಪ್ರವಾಹ ತಡೆ ಕಾಮಗಾರಿಗೆ ₹ 36.00 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಅದು ಯಾವ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಜಮೆಯಾಗಿರುತ್ತದೆ;

ಇ) ಪ್ರಸಕ್ತ ವರ್ಷದಲ್ಲಿ ಅತೀವೃಷ್ಟಿಯಿಂದ ಬೆಣ್ಣೆ ಹಳ್ಳದ ನೀರಿನಿಂದ ರೈತರಿಗೆ ಸಾಕಷ್ಟು ಬೆಳೆ ಹಾನಿಯಾಗಿದ್ದು, ಇಲ್ಲಿಯವರೆಗೆ ಅಂದಾಜು ಪತ್ರಿಕೆ ಮತ್ತು ಟೆಂಡರ್ ಪ್ರಕ್ರಿಯೆ ಮಾಡದಿರಲು ಕಾರಣವೇನು;

ಈ) ಈ ಯೋಜನೆ ಜಾರಿಗೊಳಿಸಲು ಕಾಲಮಿತಿ ನಿಗಧಿ ಪಡಿಸಲಾಗಿದೆಯೇ; (ಪೂರ್ಣ ಮಾಹಿತಿ ನೀಡುವುದು)

ಉ) ವಿಳಂಬಕ್ಕೆ ಕಾರಣವಾದ ಅಧಿಕಾರಿಗಳ ಮೇಲೆ ಯಾವ ಕ್ರಮ ಜರುಗಿಸಲಾಗಿದೆ? (ಪೂರ್ಣ ಮಾಹಿತಿ ನೀಡುವುದು)

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲ ಸಂಪನ್ಮೂಲ ಸಚಿವರು)

ಅ) ಸದರಿ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ.

ಆ) 2013–14ನೇ ಸಾಲಿನಲ್ಲಿ ಮಲಪ್ರಭಾ ಯೋಜನಾ ವಲಯಕ್ಕೆ State Disaster Mitigation Fund (SDMF) ಶೀರ್ಷಿಕೆಯಡಿಯಲ್ಲಿ ಒಟ್ಟು ₹ 34.60 ಕೋಟಿಗಳಷ್ಟು ಅನುದಾನ ಹಂಚಿಕೆಯಾಗಿರುತ್ತದೆ. ಇದರಡಿ ₹ 7.00 ಕೋಟಿ ಅನುದಾನ ರಾಮದುರ್ಗ ತಾಲ್ಲೂಕಿನಲ್ಲಿ ಬರುವ

ಮಲಪ್ರಭಾ ನದಿಯ River Training works ಗಾಗಿ ಹಾಗೂ ಬೆಣ್ಣೆಹಳ್ಳದ ಪ್ರವಾಹ ನಿಯಂತ್ರಣಕ್ಕೆ ಸಂಬಂಧಿಸಿದಂತೆ ₹ 27.60 ಕೋಟಿ ಅನುದಾನ ಹಂಚಿಕೆಯಾಗಿತ್ತು.

ಇ) ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಜಲ ಆಯೋಗದ ಮಾರ್ಗ ಸೂಚಿಯನ್ವಯ ಸಮಗ್ರ ಯೋಜನಾ ವರದಿ ತಯಾರಿಸುವ ಸಲುವಾಗಿ ಸಮಾಲೋಚಕರನ್ನು ನೇಮಿಸುವ ಸಲುವಾಗಿ ಕನ್ಸಲ್ಟೆನ್ಸಿ ಮುಖಾಂತರ ಕೈಗೆತ್ತಿಕೊಳ್ಳಲು ದಿನಾಂಕ: 24.01.2014 ರಂದು ಜರುಗಿದ 62ನೇ ನಿಗಮದ ನಿರ್ದೇಶಕರ ಮಂಡಳಿಯಲ್ಲಿ ಅನುಮೋದನೆಯಾಗಿರುತ್ತದೆ ಹಾಗೂ WAPCOS ಸಂಸ್ಥೆಗೆ ಸರ್ಕಾರದಿಂದ KTPP ಕಾಯ್ದೆಯಡಿ ವಿನಾಯ್ತಿ ಪಡೆದು ವಹಿಸಲು ಸೂಚಿಸಲಾಗಿರುತ್ತದೆ. ಆದರೆ, ದಿನಾಂಕ 20.09.2014 ರಂದು ಜರುಗಿದ ನಿಗಮದ 66ನೇ ನಿರ್ದೇಶಕರ ಮಂಡಳಿಯ ನಿರ್ದೇಶನದಂತೆ, ಸದರಿ ಕಾಮಗಾರಿಯನ್ನು ಟೆಂಡರ್ ಕರೆದು ವಹಿಸುವುದು ಸೂಕ್ತವೆಂಬ ಅಭಿಪ್ರಾಯ ವ್ಯಕ್ತಪಡಿಸಿದಂತೆ, ಬೆಣ್ಣೆಹಳ್ಳದ ಪ್ರವಾಹ ನಿಯಂತ್ರಣದ ಅಧ್ಯಯನಕ್ಕಾಗಿ ಸಮಾಲೋಚಕರನ್ನು ನೇಮಿಸುವ ಸಲುವಾಗಿ ನಿಗಮದ ವತಿಯಿಂದ ದಿನಾಂಕ 06.12.2014 ರಂದು ಟೆಂಡರ್ ನೋಟಿಫಿಕೇಶನ್ ಹೊರಡಿಸಿರುತ್ತಾರೆ.

ಈ) ಕಾಮಗಾರಿಯನ್ನು ತ್ವರಿತವಾಗಿ ಪ್ರಾರಂಭಿಸಲು ಅನುವಾಗುವಂತೆ ವಿವರವಾದ ಯೋಜನಾ ವರದಿಗಳನ್ನು ತಯಾರಿಸಲು ಸಮಾಲೋಚಕರನ್ನು ನೇಮಿಸಲು ಕ್ರಮ ಜರುಗಿಸಲಾಗಿದ್ದು, ಯೋಜನಾ ವರದಿ ತಯಾರಿಸಿದ ನಂತರ ನಿಯಮಾವಳಿಯನ್ವಯ ಮುಂದಿನ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.